ಅವನು ಅವಳ ಮಾತಿನಿಂದ ಪ್ರಭಾವಿತನಾಗಿ ಹುರುಪುಗೊಂಡ. ಆದರೆ ಬಹಳ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡನು. ಅವನು ನ್ಯಾನ್ಸಿಯನ್ನು ಚುಂಬಿಸಿದ್ದನೇ? ಅದು ನೆನಪು ಮಾತ್ರವೇ? ಅಥವಾ ಮೆಲುವಾಗಿ ಕಂಪಿಸುತ್ತಿರುವ ಈ ಸೊಗಸುಗಾತಿ ಅಪರಿಚಿತೆ ಅವನಿಂದ ಪಕ್ಕನೆ ಬೇರೆಡೆ ದೃಷ್ಟಿ ಹರಿಸಿ ಆಲ್ಬಂ ಪುಟಗಳನ್ನು ತಿರುವಿಹಾಕಿದಳೇ?

'ಸ್ವಲ್ಪ ತಡಿ!' ಅವನು ಹೇಳಿದನು. 'ನಾನು ಆ ಭಾವಚಿತ್ರವನ್ನು ಸ್ವಲ್ಪ ಹೊತ್ತು ಸಹ ಸರಿಯಾಗಿ ನೋಡಿದಂತೆ ನನಗನಿಸುತ್ತಿಲ್ಲ ,'

'ನಾವು ಅದನ್ನು ಪುನಃ ಮಾಡುವುದು ಬೇಡ. ನಾನು ಪುನಃ ಅಷ್ಟೊಂದು ಶಾಂತತೆಯಿಂದ ಇರುವುದು ಸಾಧ್ಯವಿಲ್ಲ.'

ಡೊನಾಲ್ಡ್ ಒಂದು ಕ್ಷುಲ್ಲಕ ವಿಷಯವನ್ನು ಹೇಳಿದನು. ಅದು ಎಷ್ಟೊಂದು ವಾಸ್ತವಾಂಶಗಳನ್ನು ಒಳಗೊಂಡಿತ್ತು.

'ನಾವೀಗ ಪುನಃ ಪ್ರೀತಿಸಲಾರಂಭಿಸಿದರೆ ಅದು ಚೆನ್ನಾಗಿರೋದಿಲ್ಲ ಅಲ್ವೇ!'

'ನಿಲ್ಲಿಸು!' ಅವಳು ನಕ್ಕಳು, ಆದರೆ ಉಸಿರುಗಟ್ಟುವಂತೆ ನಕ್ಕಳು. 'ಅದೆಲ್ಲಾ ಮುಗಿದುಹೋಗಿದೆ. ಅದೊಂದು ಕ್ಷಣವಾಗಿತ್ತು. ಆ ಕ್ಷಣವನ್ನು ನಾನು ಮರೆಯಬೇಕು.'

'ನಿನ್ನ ಗಂಡನಿಗೆ ಹೇಳಬೇಡ.'

'ಯಾಕೆ ಹೇಳಬಾರದು? ಸಾಮಾನ್ಯವಾಗಿ ನಾನು ಎಲ್ಲವನ್ನೂ ಅವನಿಗೆ ಹೇಳುತ್ತೇನೆ.'

'ಅವನಿಗೆ ಅದರಿಂದ ನೋವಾಗಬಹುದು. ಅಂತಹ ವಿಷಯಗಳನ್ನು ಎಂದೂ ಅವನಿಗೆ ಹೇಳಬೇಡ.'

'ಆಯ್ತು, ನಾನು ಹೇಳಲ್ಲ.'

'ಇನ್ನೊಮ್ಮೆ ನನ್ನನ್ನು ಚುಂಬಿಸು,' ಅವನು ಇದ್ದಕ್ಕಿದ್ದಂತೆ ಬೇಕಾಬಿಟ್ಟಿಯಾಗಿ ಹೇಳಿದನು. ಆದರೆ ನ್ಯಾನ್ಸಿ ಆಲ್ಬಂ ಪುಟವನ್ನು ತಿರುವಿ ಹಾಕಿದಳು ಮತ್ತು ಒಂದು ಚಿತ್ರದ ಕಡೆ ತುಂಬಾ ಆಸಕ್ತಿಯಿಂದ ಬೆರಳುಮಾಡಿ ತೋರಿಸಿದಳು.

'ನೀನು ಇಲ್ಲಿದೀಯಾ ನೋಡು,' ಅವಳು ಜೋರಾಗಿ ಹೇಳಿದಳು, ಇಲ್ಲೇ ನೋಡು!'

ಅವನು ನೋಡಿದನು. ಅದು ಹಿನ್ನೆಲೆಯಲ್ಲಿ ದೋಣಿಯಿರುವ, ಚಕ್ರದ ಮೇಲೆ ನಿಂತಿರುವ ಚಡ್ಡಿ ಹಾಕಿಕೊಂಡಿರುವ ಒಬ್ಬ ಚಿಕ್ಕ ಹುಡುಗನ ಚಿತ್ರವಾಗಿತ್ತು.

'ನನಗೆ ನೆನಪಾಗುತ್ತಿದೆ' ಅವಳು ವಿಜಯಸಾಧಿಸಿದಂತೆ ನಕ್ಕಳು, 'ಅದೇ ದಿವಸ ಅದನ್ನು ತೆಗೆದಿರುವುದು. ಕಿಟ್ಟಿ ಅದನ್ನು ತೆಗೆದಿರುವುದು ಮತ್ತು ಅದೇ ದಿನ ನಾನು ಅವಳಿಂದ ಅದನ್ನು ಕದ್ದೆ.'

ಒಂದು ಕ್ಷಣ ಡೊನಾಲ್ಡ್‌ಗೆ ಆ ಚಿತ್ರದಲ್ಲಿರುವ ಹುಡುಗನನ್ನು ಗುರುತಿಸಲಾಗಲಿಲ್ಲ... ಆಗ, ಹತ್ತಿರ ಬಾಗಿ ನೋಡಿದನು. ಅವನಿಗೆ ತನ್ನನ್ನು ಗುರುತಿಸಲು ಸಾಧ್ಯವಾಗಲೇ ಇಲ್ಲ.

'ಅದು ನಾನಲ್ಲ' ಎಂದು ಅವನು ಹೇಳಿದನು

'ಹೌದು ಅದು ಫ್ರಾಂಟೆನಾಕ್‌ನಲ್ಲಿ ಆ ಬೇಸಿಗೆಯಲ್ಲಿ ನಾವು ಗುಹೆಗೆ ಹೋಗ್ತಾ ಇದ್ದೆವು.'

'ಯಾವ ಗುಹೆಗೆ? ನಾನು ಫ್ರಾಂಟೆನಾಕ್‌ನಲ್ಲಿ ಕೇವಲ ಮೂರು ದಿವಸ ಮಾತ್ರ ಇದ್ದೆ.' ಅವನು ಪುನಃ ಹಳದಿ ಬಣ್ಣಕ್ಕೆ ತಿರುಗಿದ ಆ ಚಿತ್ರವನ್ನು ನೋಡಲು ತನ್ನ ಕಣ್ಣುಗಳಿಗೆ ಸ್ವಲ್ಪ ಕಷ್ಟಕೊಟ್ಟನು. 'ಮತ್ತು ಅದು ನಾನು ಅಲ್ಲವೇ ಅಲ್ಲ. ಅದು ಡೊನಾಲ್ಡ್ ಬೋವರ್ಸ್. ನಾವು ಬಹುಶಃ ಒಂದೇ ರೀತಿ ಕಾಣುತ್ತಿದ್ದೆವು.'